ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಕೃಷ್ಣರಾಜಪೇಟೆ ತಾ; ಮಂಡ್ಯ ಜಿಲ್ಲೆ

ಸಂಖ್ಯೆ: ಎ2492/ಮಾ. ನವೀ/75/2018-19 ದಿನಾಂಕ: 18/08/2018

ಜ್ಞಾಪನ

ವಿಷಯ: ಗ್ರಾಮ ಭಾರತಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಕೆ.ಆರ್.ಪೇಟೆ, ಈ ಶಾಲೆಯ ಮಾನ್ಯತೆ ನವೀಕರಣ ಮಾಡುವ ಬಗ್ಗೆ.

ಉಲ್ಲೇಖ: 1.ಕಾರ್ಯದರ್ಶಿ/ಮುಖ್ಯೋಪಾಧ್ಯಾಯರು, ಗ್ರಾಮ ಭಾರತಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಕೃಷ್ಣರಾಜಪೇಟೆ ತಾ: ಇವರ ಮಾನ್ಯತೆ ನವೀಕರಣ ಪ್ರಸ್ತಾವನೆ ದಿನಾಂಕ

2. ಸರ್ಕಾರದ ಆದೇಶ ಸಂ:ಇಡಿ: 137 ವಿವಿಧ 98 ದಿನಾಂಕ: 19-05-1999

3. ಕ್ಷೇತ್ರಶಿಕ್ಷಣಾಧಿಕಾರಿಗಳು ಕೃಷ್ಣರಾಜಪೇಟೆ ಇವರ ಸ್ಥಳ ಪರಿಶೀಲನಾ ವರದಿ ದಿನಾಂಕ: 18/08/2018

ಆದೇಶ:-

ಗ್ರಾಮ ಭಾರತಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ,ಕೃಷ್ಣರಾಜಪೇಟೆ,ಮಂಡ್ಯ ಜಿಲ್ಲೆ ಈ ಶಾಲೆಗೆ 06 ರಿಂದ 08 ನೇ ತರಗತಿವರೆಗೆ ತಲಾ ಒಂದು ವಿಭಾಗಗಳಿಗೆ ಶಾಶ್ವತ ಅನುದಾನ ರಹಿತವಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳ ಸ್ಥಳ ಪರಿಶೀಲನಾ ವರದಿ ಮತ್ತು ಅಭಿಪ್ರಾಯದನ್ವಯ ಕೆಳಕಂಡ ಷರತ್ತುಗಳನ್ನು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರೊಳಗಾಗಿ ಪೂರೈಸಬೇಕೆಂದು ಆದೇಶಿಸಿ 2017-18 ರಿಂದ 2018-19 (31/05/2019) ರವರೆಗೆ ಮಾನ್ಯತೆ ನವೀಕರಿಸಲಾಗಿದೆ.

ಷರತ್ತುಗಳು:-

01. ಪ್ರತಿಯೊಂದು ತರಗತಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಕನಿಷ್ಠ 50:40:1 (ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ/ಶಿಕ್ಷಕರ ಅನುಪಾತ)ರಂತೆ ಕಡ್ಡಾಯವಾಗಿ ಇರತಕ್ಕದ್ದು.
02. ಇಲಾಖೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ತರಬೇತಿ ಹೊಂದಿದ ಶಿಕ್ಷಕರನ್ನೇ ನಿಯಮಗಳನ್ವಯ ನೇಮಕ ಮಾಡಿಕೊಂಡು ಬೋಧನೆ ಮಾಡಬೇಕು.
03. ಶಾಲೆಯು ಸ್ವಂತ ಕಟ್ಟಡ ಮತ್ತು ಆಟದ ಮೈದಾನ ಹೊಂದಿರಬೇಕು.
04. ಶಾಲೆಗೆ ಅನುದಾನ ಸಂಹಿತೆಯ ರಿತ್ಯಾ ಪಾಠೋಪಕರಣ ಮತ್ತು ಪೀಠೋಪಕರಣಗಳನ್ನು ಒದಗಿಸತಕ್ಕದ್ದು.
05. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಶುದ್ಧ ಕುಡಿಯುವ ನೀರು ಒದಗಿಸತಕ್ಕದ್ದು.
06. ಶಾಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಒದಗಿಸತಕ್ಕದ್ದು.
07. ಇಲಾಖೆಯು ನಿಗದಿಪಡಿಸಿರುವ ಪಠ್ಯ ಪುಸ್ತಕ ಹಾಗೂ ಬೋಧನಾ ಕ್ರಮವನ್ನು ಕಡ್ಡಾಯವಾಗಿ ಅನುಸರಿಸಬೇಕು.
08. ಇಲಾಖೆಯು ನಿಗದಿಪಡಿಸುವ ಶಾಲಾ ವೇಳೆ ಮತ್ತು ವೇಳಾಪಟ್ಟಿಯನ್ನು ಅನುಸರಿಸಬೇಕು.
09. ಸ್ಥಿರನಿಧಿ ಠೇವಣಿಯನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲೇ ಜಂಟಿಖಾತೆಯಲ್ಲಿ ತೊಡಗಿಸಿ ಅವಧಿ ಮುಗಿದ ತಕ್ಷಣ ಆಗಿಂದಾಗ್ಗೆ ನವೀಕರಿಕೊಳ್ಳಬೇಕು.
10. ಶಾಲೆಗೆ ವಿಜ್ಞಾನ ಮತ್ತು ಬೋಧನಾ ಉಪಕರಣಗಳನ್ನು ಒದಗಿಸತಕ್ಕದ್ದು.
11. ಇಲಾಖೆಯ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಹೆಚ್ಚಿನ ವಿಭಾಗಗಳನ್ನು ತೆರೆಯಕೂಡದು.
12. ಮುಂದಿನ ಸಾಲಿನ ಪ್ರಸ್ತಾವನೆಯನ್ನು ಅನುದಾನ ಸಂಹಿತೆಯ 19(1)ರ ರಿತ್ಯಾ ನಿಗದಿತ ವೇಳೆಗೆ ಸಲ್ಲಿಸಬೇಕು.
13. ಸರ್ಕಾರ ಮತ್ತು ಇಲಾಖೆಯು ಹೊರಡಿಸುವ ಆದೇಶಗಳನ್ನು ತಪ್ಪದೇ ಪಾಲಿಸಬೇಕು.
14. ಮಕ್ಕಳ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
15. ಸಿ.ಸಿ.ಟಿ.ವಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
16. ಶಾಲೆಯು ಇಲಾಖೆಯ ನಿಯಮಗಳನ್ನು ಪಾಲಿಸದಿರುವ ಬಗ್ಗೆ ಮತ್ತು ಸಾರ್ವಜನಿಕರಿಂದ ಕರ್ತವ್ಯ ಲೋಪದ ಬಗ್ಗೆ ದೂರು ಬಂದಲ್ಲಿ ಈ ಬಗ್ಗೆ ಪರಿಶೀಲಿಸಿ ಮಾನ್ಯತೆ ವಾಪಸ್ಸು ಪಡೆಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕ್ಷೇತ್ರಶಿಕ್ಷಣಾಧಿಕಾರಿಗಳು
ಕೃಷ್ಣರಾಜಪೇಟೆ

ಪ್ರತಿಗಳನ್ನು,

01 . ಕಾರ್ಯದರ್ಶಿ/ಮುಖ್ಯೋಪಾಧ್ಯಾಯರು, ಗ್ರಾಮ ಭಾರತಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಕೃಷ್ಣರಾಜಪೇಟೆ: ರವರಿಗೆ

02 ಕಛೇರಿ ಪ್ರತಿ.

3. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಶೇಕಡಾ 25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡುವುದು. ಆರ್.ಟಿ.ಇ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಸರ್ಕಾರವು ಮೀಸಲಿಟ್ಟ ಸೀಟುಗಳನ್ನು ಆರ್.ಟಿ.ಇ ಅಡಿಯಲ್ಲಿ ದಾಖಲಿಸಲು ಅಧಿಕಾರ ಹೊಂದಿರುತ್ತದೆ. [ಸರ್ಕಾರವು ಮಕ್ಕಳ ಪೋಷಕರು ವಾಸಿಸುವ ಅಕ್ಕ ಪಕ್ಕದ ಶಾಲೆಗಳಲ್ಲಿ ದಾಖಲಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿದ್ದು, ಅದರಂತೆ ಸರ್ಕಾರಿ, ಸರ್ಕಾರದಿಂದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳು ಇದ್ದಲ್ಲಿ ಆ ಶಾಲೆಗೆ ಮಕ್ಕಳನ್ನು ದಾಖಲಿಸಲಾಗುವುದು] ಇಲ್ಲದಿದ್ದ ಪಕ್ಷದಲ್ಲಿ ಖಾಸಗಿ ಶಾಲೆಗಳು ಸರ್ಕಾರದಿಂದ ದಾಖಲಿಸುವ ಮಕ್ಕಳನ್ನು ದಾಖಲಿಸಿಕೊಂಡು ಪ್ರಾಥಮಿಕ ಹಂತದವರೆಗೆ ವಿದ್ಯಾಬ್ಯಾಸ ಮುಂದುವರೆಸಲು ಅವಕಾಶ ನೀಡುವುದು. ಈ ಮಕ್ಕಳನ್ನು ಯಾವುದೇ ತಾರತಮ್ಯವಿಲ್ಲದೆ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸುವುದು.

4. ಕಂಡಿಕೆ:3ರಲ್ಲಿ ವಿವರಿಸಿರುವಂತೆ ಆರ್.ಟಿ.ಇ ನಿಯಮದಡಿ ದಾಖಲಾದ ಮಕ್ಕಳ ಶುಲ್ಕಗಳನ್ನು ನಿಯಮಾನುಸಾರ ಸರ್ಕಾರವು ಬಿಡುಗಡೆ ಮಾಡುತ್ತದೆ. ಆದ್ದರಿಂದ ಈ ಮಕ್ಕಳಿಂದ ಯಾವುದೇ ಶುಲ್ಕವನ್ನು ವಸೂಲು ಮಾಡುವುದನ್ನು ನಿರ್ಭಂದಿಸಿದೆ.

5. ಶಾಲೆ ಮತ್ತು ಶಾಲೆಯ ಆಡಳಿತ ಮಂಡಳಿಯು ಯಾವುದೇ ತರವಾದ ಕ್ಯಾಪಿಟೇಷನ್ ಶುಲ್ಕವನ್ನು ಮತ್ತು ಸ್ವಇಚ್ಛೆಯಿಂದ ನೀಡುವ ಡೊನೇಷನ್ಗಳನ್ನು ಪೋಷಕರಿಂದ ದಾಖಲಾತಿ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಯಾವುದೇ ರೀತಿಯಾಗಿ ವಸೂಲು ಮಾಡುವುದನ್ನು ನಿರ್ಭಂದಿಸಿದೆ.

6. ಶಾಲೆಯು / ಆಡಳಿತ ಮಂಡಳಿಯು ತಾವು ನಿಗದಿಪಡಿಸಿರುವ ಶುಲ್ಕದ ಮಾಹಿತಿಯನ್ನು ಆರ್.ಟಿ.ಇ ಕಾಯ್ದೆ ಸೆಕ್ಷನ್ 2B ರನ್ವಯ ಶಾಲಾ ಸೂಚನಾ ಫಲಕ/ಜಾಲತಾಣ ಹಾಗೂ SATS ನಲ್ಲಿ ಪ್ರಕಟಿಸುವುದು. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

7. ಶಾಲೆಯು / ಆಡಳಿತ ಮಂಡಳಿಯು ವಿದ್ಯಾರ್ಥಿಗಳನ್ನು ಸರ್ಕಾರವು ನಿಗದಿಪಡಿಸಿದೆ ಅವಧಿಯಲ್ಲಿಯೇ ದಾಖಲಾತಿ ಮಾಡಿಕೊಳ್ಳುವುದು.

8. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡ ಅಂಶಗಳ ವಿರುದ್ಧ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(i) ವಯಸ್ಸಿನ ಪುರಾವೆ ಕೊರತೆಯಿಂದಾಗಿ.

(ii) ಜಾತಿ, ಧರ್ಮ, ಹುಟ್ಟಿದ ಸ್ಥಳ, ಭಾಷೆಯ ಆಧಾರದ ಮೇಲೆ.

(iii) ಪ್ರವೇಶದ ವಿಸ್ತøತ ಅವಧಿಯ ನಂತರ ಪ್ರವೇಶವನ್ನು ಕೋರಿದರೆ.

9. ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. [ಸಂಬಂಧಿಸಿದ ಪ್ರಾಧಿಕಾರಗಳಿಂದ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಹಾಗೂ K.S.C.P.C.R ಮತ್ತು N.C.P.C.R ಪ್ರಕಾರ ಮಕ್ಕಳ ಕಲಿಕೆಯ ಸುರಕ್ಷತೆ].

10. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡಂತೆ

(i) ಪ್ರವೇಶ ಪಡೆದ ಯಾವುದೇ ಮಗುವನ್ನು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಯಾವುದೇ ತರಗತಿಯಲ್ಲಿ ಹಿಡಿದಿಟ್ಟುಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

(ii) ಯಾವುದೇ ಮಗುವನ್ನು ದೈಹಿಕ ಅಥವಾ ಮಾನಸಿಕವಾಗಿ ಕಿರುಕುಳಕ್ಕೆ ಒಳಪಡಿಸಬಾರದು.

(iii) ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ಮಗು ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ.

(iv) ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರತಿ ಮಗುವಿಗೆ ಆರ್.ಟಿ.ಇ ನಿಯಮ 21 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದಂತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

(v) ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳ ಪ್ರಕಾರ ಶಾಲೆಯು ವಿಶೇಷ ಅಗತ್ಯತೆಗಳು / ವಿಶೇಷ ಮಕ್ಕಳನ್ನು ಹೊಂದಿರುವ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕು.

(vi) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಹಾಗೂ ಸರ್ಕಾರಿ ಆದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಿದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.

(vii) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ಸೂಚಿಸಿದಂತೆ ಇರುತ್ತದೆ. ಮತ್ತು ಸರ್ಕಾರಿ ಅಧಿಸೂಚನೆ [ಭವಿಷ್ಯ ನಿಧಿ (Pಈ)] ಮತ್ತು ಪಾವತಿಸಬೇಕಾದ ಬ್ಯಾಂಕ್ ಮತ್ತು ಇತರೆ ವೇತನಗಳ ಮೂಲಕ ಶಿಕ್ಷಕರಿಗೆ ವೇತನವನ್ನು ಪಾವತಿಸಲಾಗುತ್ತದೆ. ಮತ್ತು ಉದ್ಯೋಗಿ ರಾಜ್ಯ ವಿಮೆಗೆ (ಇSI) ಒಳಪಡಿಸುತ್ತದೆ.

(viii) ಶಿಕ್ಷಕರು ಕಾಯ್ದೆ ಸೆಕ್ಷನ್ 24[1] ಮತ್ತು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಯಮ 17ರ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಮೇಲ್ವಿಚಾರಣೆ ಪರಿಗಣನೆಗಳಿಗಾಗಿ ಖಾಸಗಿ ಟ್ಯೂಷನ್ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ.